# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1235** |
| ಸದಸ್ಯರ ಹೆಸರು | : | ಶ್ರೀ ಕೆ.ವಿ.ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 07.03.2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

*****

| | ಪ್ರಶ್ನೆ | ಉತ್ತರ |
|---|---|---|
| ಅ) | ರೈತರಿಗೆ ತಮ್ಮ ಹೊಲದಲ್ಲಿ ಕೊರೆಸಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಮತ್ತು ಹೊಸದಾಗಿ ವಿದ್ಯುತ್ ಕಂಬ ಮತ್ತು ಟ್ರಾನ್ಸ್‌ಫಾರ್ಮರ್ ಅಳವಡಿಸಲು ಇಂಧನ ಇಲಾಖೆಯಿಂದ ವಿಧಿಸುತ್ತಿರುವ ಶುಲ್ಕವೆಷ್ಟು; | ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ಸರ್ಕಾರಿ ಸುತ್ತೋಲೆ ಸಂಖ್ಯೆ: ಇನ್/41/ವಿಎಸ್‌ಸಿ/2014 ದಿನಾಂಕ 14/07/2014 ರಂದು ಸರ್ಕಾರಿ ಆದೇಶ ಹೊರಡಿಸಲಾಗಿದ್ದು, ಅಕ್ರಮ ಸಕ್ರಮ ಹಾಗೂ ಹೊಸದಾಗಿ ನೊಂದಾಯಿಸಲ್ಪಡುವ ಅರ್ಜಿಗಳು ಎಂಬ ಬೇದ ವಿಲ್ಲದೆ ನೊಂದಾಯಿಸಲ್ಪಡುವ ಎಲ್ಲಾ ಅರ್ಜಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸೂಚಿಸಲಾಗಿರುತ್ತದೆ. ಸದರಿ ಆದೇಶದಂತೆ ರೂ 10,000/- ಹಾಗೂ ಠೇವಣಿ ಹಣ ಪಾವತಿಸಿರುವ ರೈತರ ಸ್ಥಳ ಪರಿಶೀಲನೆ ಮಾಡಿದ ನಂತರ ಪಂಪ್‌ಸೆಟ್‌ಗೆ ಸನಿಹ ಇರುವ ವಿದ್ಯುತ್ ಮಾರ್ಗದ ಲಭ್ಯತೆ ಮತ್ತು ಪರಿವರ್ತಕದ ಹಾಲಿ ಇರುವ ಹೊರೆಯನ್ನು ಪರಿಶೀಲಿಸಿ ತಾಂತ್ರಿಕ ಸಾಧ್ಯತೆಗೆ ಅನುಗುಣವಾಗಿ ಸರ್ವೀಸ್ ಮೇನ್ ಮೂಲಕ/ಎಲ್.ಟಿ. ಮಾರ್ಗ ವಿಸ್ತರಣೆ/ ಅವಶ್ಯಕತೆ ಇರುವಲ್ಲಿ ಹೊಸ ಪರಿವರ್ತಕ ಅಳವಡಿಸಲು ಜೇಷ್ಠತಾ ಪಟ್ಟಿ ಅನುಸಾರ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. ರೈತರ ಕೃಷಿ ಪಂಪಸೆಟ್‌ಗಳಿಗೆ ಅವಶ್ಯಕತೆವಿರುವೆಡೆ ಪರಿವರ್ತಕಗಳನ್ನು ಅಳವಡಿಸಲು ರೈತರಿಂದ ಯಾವುದೇ ಶುಲ್ಕವನ್ನು ತೆಗೆದುಕೊಳ್ಳುವುದಿಲ್ಲ.<br><br>ಕರ್ನಾಟಕ ಸರ್ಕಾರದ ಅಧಿಸೂಚನೆ ದಿನಾಂಕ 14-7-2014ರ ಆದೇಶದನ್ವಯ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕಗಳನ್ನು ಪಡೆಯಲು ರೈತರು ಪಾವತಿಸಬೇಕಾಗಿರುವ ಠೇವಣಿ ಮತ್ತು ಇತರೆ ಶುಲ್ಕಗಳ ವಿವರಗಳು ಕೆಳಕಂಡಂತಿವೆ:-<br><br>1. ಅರ್ಜಿ ನೋಂದಣಿ ಶುಲ್ಕ : ರೂ.50/-<br>2. ಮೂಲಭೂತ ಸೌಕರ್ಯ ಶುಲ್ಕ : ರೂ. 10,000/-<br>3. ಭದ್ರತಾ ಠೇವಣಿ ಶುಲ್ಕ (ಪ್ರತಿ ಹೆಚ್.ಪಿ.ಗೆ) ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಈ ಕೆಳಕಂಡಂತಿದೆ:<br>(ರೂ. ಗಳಲ್ಲಿ)<br>**ಬೆಸ್ಕಾಂ** \| **ಮೆಸ್ಕಾಂ** \| **ಸೆಸ್ಕ್** \| **ಹೆಸ್ಕಾಂ** \| **ಜೆಸ್ಕಾಂ**<br>1290/- \| 1770/- \| 1230/- \| 1390/- \| 1280/-<br><br>ಠೇವಣಿ ಮೊತ್ತ ಮತ್ತು ಇತರೆ ಶುಲ್ಕಗಳನ್ನು ಪಾವತಿಸಿದ ನಂತರ ಜೇಷ್ಠತೆಯ ಆಧಾರದಲ್ಲಿ ಮೂಲಭೂತ ಸೌಕರ್ಯವನ್ನು ರಚಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. |

...2

<table>
<tr><td>ಆ)</td><td>ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಇದರಲ್ಲಿ ಇರುವ ವಿನಾಯಿತಿಗಳು ಯಾವುವು;</td><td>ಸಣ್ಣ ಮತ್ತು ಅತೀ ಸಣ್ಣ ರೈತರು ಎಂಬ ಬೇಧವಿಲ್ಲದೆ ಎಲ್ಲಾ ರೈತರು ಮೇಲ್ಕಂಡ ಶುಲ್ಕಗಳನ್ನು ಪಾವತಿಸಬೇಕಾಗಿರುತ್ತದೆ.</td></tr>
<tr><td>ಇ)</td><td>ಪ್ರತಿ ವರ್ಷ ರೈತರಿಗೆ ಉಚಿತ ವಿದ್ಯುತ್ ಒದಗಿಸಲು ಸರ್ಕಾರ ಮಾಡುತ್ತಿರುವ ವೆಚ್ಚವೆಷ್ಟು; (2018 ರಿಂದ 2022 ವರೆಗೆ ವಿವರ ನೀಡುವುದು)</td><td>ರಾಜ್ಯದ ರೈತರ 10 ಹೆಚ್.ಪಿ ಸಾಮರ್ಥ್ಯದವರೆಗಿನ ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಸರಬರಾಜು ಮಾಡಲು ಸರ್ಕಾರದಿಂದ ಬಿಡುಗಡೆಯಾದ ಸಹಾಯಧನದ ವಿವರಗಳು ಕೆಳಕಂಡಂತಿವೆ:-<br><br>
(ರೂ.ಕೋಟಿಗಳಲ್ಲಿ)
<table>
<tr><th>ವಿದ್ಯುತ್ ಸರಬರಾಜು ಕಂಪನಿ ಹೆಸರು</th><th>2017-18</th><th>2018-19</th><th>2019-20</th><th>2020-21</th><th>2021-22 (ಫೆಬ್ರುವರಿ 22ರ ಅಂತ್ಯಕ್ಕೆ)</th></tr>
<tr><td>ಬೆಸ್ಕಾಂ</td><td>1785.20</td><td>2182.58</td><td>2434.57</td><td>2554.26</td><td>2379.15</td></tr>
<tr><td>ಮೆಸ್ಕಾಂ</td><td>615.40</td><td>605.97</td><td>868.38</td><td>852.54</td><td>883.93</td></tr>
<tr><td>ಹೆಸ್ಕಾಂ</td><td>3168.75</td><td>2887.68</td><td>4053.96</td><td>3982.41</td><td>3461.47</td></tr>
<tr><td>ಜೆಸ್ಕಾಂ</td><td>1663.88</td><td>1602.40</td><td>1902.37</td><td>1709.97</td><td>1575.80</td></tr>
<tr><td>ಸೆಸ್ಕ್</td><td>1121.53</td><td>1361.59</td><td>1364.07</td><td>1479.79</td><td>1493.02</td></tr>
<tr><td>ಹುಕ್ಕೇರಿ</td><td>95.13</td><td>216.44</td><td>120.11</td><td>97.72</td><td>86.58</td></tr>
<tr><td>ಒಟ್ಟು</td><td>8449.89</td><td>8856.66</td><td>10743.46</td><td>10676.69</td><td>9879.95</td></tr>
</table></td></tr>
<tr><td>ಈ)</td><td>ಸರ್ಕಾರ ರೈತರಿಗೆ ಉಚಿತ/ ರಿಯಾಯಿತಿ ದರದಲ್ಲಿ ಸೋಲಾರ್ ಪಂಪ್‌ಸೆಟ್ ವಿತರಿಸುತ್ತಿದೆಯೇ;<br>ವಿತರಿಸುತ್ತಿದ್ದಲ್ಲಿ, ಉಚಿತವಾಗಿ ಸೋಲಾರ್ ಪಂಪ್‌ಸೆಟ್ ಪಡೆಯಲು ಇರಬೇಕಾದ ಅರ್ಹತೆಯೇನು;</td><td>ರೈತರ ಕೊಳವೆಬಾವಿಗಳಿಗೆ 5 ಹೆಚ್ ಪಿ ಸಾಮರ್ಥ್ಯದ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್ ಸೆಟ್ ಅಳವಡಿಸುವ ಯೋಜನೆಯನ್ನು 2014-15ನೇ ಸಾಲಿನಲ್ಲಿ ಸರ್ಕಾರದಿಂದ ಜಾರಿಗೆ ತರಲಾಗಿದ್ದು, ಸದರಿ ಯೋಜನೆಯಡಿ ಪ್ರತಿ ಪಂಪ್‌ಸೆಟ್‌ಗೆ ಕೇಂದ್ರ ಸರ್ಕಾರದ ಸಹಾಯಧನ ಗರಿಷ್ಠ ಶೇ. 30 ರಷ್ಟು ಒದಗಿಸಲಾಗಿದ್ದು, ಸಾಮಾನ್ಯ ವರ್ಗದ ರೈತ ಫಲಾನುಭವಿಗಳಿಂದ ಪ್ರತಿ ಸೌರ ಪಂಪ್ ಸೆಟ್‌ಗೆ ರೂ.1.00 ಲಕ್ಷ ವಂತಿಗೆ ಭರಿಸಿ, ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳಿಗೆ ಉಚಿತವಾಗಿ ಸೌರ ಪಂಪ್‌ಸೆಟ್‌ಗಳನ್ನು ಅನುಷ್ಠಾನ ಗೊಳಿಸಲಾಗಿದೆ. ಕೇಂದ್ರ ಸರ್ಕಾರದ ಸಹಾಯಧನ ಹಾಗೂ ಫಲಾನುಭವಿಗಳ ವಂತಿಗೆ ನಂತರ ಉಳಿದ ಮೊತ್ತವನ್ನು ರಾಜ್ಯ ಸರ್ಕಾರದಿಂದ ಭರಿಸಲಾಗಿದ್ದು, ನವೆಂಬರ್ 2019 ರ ಅಂತ್ಯಕ್ಕೆ ಒಟ್ಟು 3710 ಸಂಖ್ಯೆ (ಸಾಮಾನ್ಯ ವರ್ಗ: 3009 ಸಂಖ್ಯೆ, ಪರಿಶಿಷ್ಟ ಜಾತಿ -487 ಸಂಖ್ಯೆ, ಪರಿಶಿಷ್ಟ ಪಂಗಡ-214 ಸಂಖ್ಯೆ) 5 ಹೆಚ್.ಪಿ ಸಾಮರ್ಥ್ಯ ಸೌರಪಂಪ್‌ಸೆಟ್ ಗಳನ್ನು ಯಶಸ್ವಿಯಾಗಿ ಅನುಷ್ಠಾಗೊಳಿಸಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲಾಗಿರುತ್ತದೆ.</td></tr>
</table>

...3

| | | |
|---|---|---|
| | | ಇದರಡಿ ಒಟ್ಟು 701 ಸಂಖ್ಯೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಉಚಿತವಾಗಿ ಸೌರ ಪಂಪ್ ಸೆಟ್‌ಗಳನ್ನು ಒದಗಿಸಲಾಗಿದೆ.<br><br>ಕೇಂದ್ರ ಸರ್ಕಾರವು ಸೌರ ಶಕ್ತಿ ಆಧಾರಿತ ಜಾಲಮುಕ್ತ ಸೌರ ನೀರಾವರಿ ಪಂಪ್‌ಸೆಟ್ ಅಳವಡಿಸುವ ಕಾರ್ಯಕ್ರಮದ ಮುಂದುವರೆದ ಭಾಗವಾಗಿ PM-KUSUM (Pradhan Mantri Kisan Urja Suraksha evam Uttan Mahaabhiyan) Component-B ಯೋಜನೆಯಡಿಯಲ್ಲಿ ದಿನಾಂಕ 22.07.2019 ರಿಂದ ಜಾರಿಗೆ ತರಲಾಗಿರುತ್ತದೆ. PM-KUSUM, Component-B ಯೋಜನೆಯಡಿಯಲ್ಲಿ 7.5 ಹೆಚ್.ಪಿ ಸಾಮರ್ಥ್ಯದ ವರೆಗೆ ಶೇ. 30 ರಷ್ಟು ಕೇಂದ್ರ ಸಹಾಯಧನ ಒದಗಿಸಲಾಗುತ್ತಿದೆ, ರಾಜ್ಯ ಸರ್ಕಾರವು ಶೇ. 30 ಸಹಾಯಧನ ಒದಗಿಸಬೇಕಾಗಿದ್ದು ಹಾಗೂ ಫಲಾನುಭವಿಗಳ ವಂತಿಗೆ ಶೇ. 40 ರಷ್ಟು ಆಗಿರುತ್ತದೆ.<br><br>ಮುಂದುವರೆದು, PM-KUSUM Component-B ಯೋಜನೆಯಡಿಯಲ್ಲಿ 2019-20 ನೇ ಪರಿಶಿಷ್ಟ ಜಾತಿ ಉಪ ಯೋಜನೆ ಹಾಗೂ ಬುಡಕಟ್ಟು ಉಪ ಯೋಜನೆಯಡಿ ಶೇ. 50 ರಷ್ಟು ರಾಜ್ಯ ಸರ್ಕಾರದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಬೊಕ್ಕಸದಿಂದ ಭರಿಸಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದ ರೈತರಿಂದ ಶೇ. 20 ರಷ್ಟು ಫಲಾನುಭವಿಯ ವಂತಿಕೆಯಾಗಿ ಪಡೆದು, ಇನ್ನುಳಿದ ಶೇ. 30 ರಷ್ಟು ಮೊತ್ತವನ್ನು ಕೇಂದ್ರ ಸರ್ಕಾರದಿಂದ ಪಡೆದು ಯೋಜನೆ ಅನುಷ್ಠಾನಗೊಳಿಸಲಾಗುತ್ತಿದ್ದು, ಈವರೆಗೆ ಒಟ್ಟು 206 ಸಂಖ್ಯೆಯ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿರುತ್ತದೆ. |
| ಉ) | ವಾರ್ಷಿಕವಾಗಿ ಎಷ್ಟು ಜನ ರೈತರಿಗೆ ಉಚಿತ ಸೋಲಾರ್ ಪಂಪ್‌ಸೆಟ್ ವಿತರಣೆ ಮಾಡಲಾಗುತ್ತಿದೆ; ಉಚಿತ ಸೋಲಾರ್ ಪಂಪ್‌ಸೆಟ್ ಫಲಾನುಭವಿಗಳ ಆಯ್ಕೆ ಮಾಡುವ ಪ್ರಕ್ರಿಯೆ ಯಾವುವು? (ಯೋಜನೆ ಜಾರಿಗೆ ಬಂದಾಗಿನಿಂದ ಇಲ್ಲಿಯವರೆಗೂ ಜಿಲ್ಲಾವಾರು ವಿವರ ನೀಡುವುದು) | 2014-15ನೇ ಸಾಲಿನಿಂದ ನವೆಂಬರ್-2019ರವರೆಗೆ ಒಟ್ಟು 701 ಸಂಖ್ಯೆಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ಫಲಾನುಭವಿಗಳಿಗೆ (ಪರಿಶಿಷ್ಟ ಜಾತಿ -487 ಸಂಖ್ಯೆ, ಪರಿಶಿಷ್ಟ ಪಂಗಡ-214 ಸಂಖ್ಯೆ) ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ ಉಚಿತವಾಗಿ 5 ಹೆಚ್.ಪಿ ಸಾಮರ್ಥ್ಯದ ಸೌರ ಪಂಪ್ ಸೆಟ್ ಗಳನ್ನು ಒದಗಿಸಲಾಗಿದ್ದು, ಸದರಿ ಯೋಜನೆಯು ಮುಕ್ತಾಯಗೊಂಡಿರುತ್ತದೆ. ಉಚಿತವಾಗಿ ಸೋಲಾರ್ ಪಂಪ್ ಪಡೆದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಿದೆ. |

ಸಂಖ್ಯೆ: ಎನರ್ಜಿ 46 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ವಿ.ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1235 ಗೆ ಅನುಬಂಧ**

**ಉಚಿತವಾಗಿ ಸೌರ ಪಂಪ್ ಸೆಟ್ ಅಳವಡಿಸಿಕೊಂಡಿರುವ ಫಲಾನುಭವಿಗಳ ಜಿಲ್ಲಾವಾರು ವಿವರ**

| ಕ್ರ.ಸಂ | ಜಿಲ್ಲೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಒಟ್ಟು |
|---|---|---|---|---|
| 1 | ಬೆಳಗಾವಿ | 52 | 27 | 79 |
| 2 | ಬಾಗಲಕೋಟೆ | 38 | 12 | 50 |
| 3 | ಬಳ್ಳಾರಿ | 8 | 6 | 14 |
| 4 | ಬೆಂಗಳೂರು | 0 | 0 | 0 |
| 5 | ಬೆಂಗಳೂರು ಗ್ರಾಮಾಂತರ | 4 | 5 | 9 |
| 6 | ಬೀದರ್ | 3 | 14 | 17 |
| 7 | ಚಾಮರಾಜನಗರ | 26 | 12 | 38 |
| 8 | ಚಿಕ್ಕಬಳ್ಳಾಪುರ | 11 | 7 | 18 |
| 9 | ಚಿಕ್ಕಮಂಗಳೂರು | 7 | 2 | 9 |
| 10 | ಚಿತ್ರದುರ್ಗ | 19 | 16 | 35 |
| 11 | ದಕ್ಷಿಣ ಕನ್ನಡ | 0 | 0 | 0 |
| 12 | ದಾವಣಗೆರೆ | 43 | 19 | 62 |
| 13 | ಧಾರವಾಡ | 4 | 2 | 6 |
| 14 | ಗದಗ | 20 | 5 | 25 |
| 15 | ಹಾಸನ | 5 | 2 | 7 |
| 16 | ಹಾವೇರಿ | 16 | 8 | 24 |
| 17 | ಕಲ್ಬುರ್ಗಿ | 42 | 14 | 56 |
| 18 | ಕೊಡಗು | 0 | 0 | 0 |
| 19 | ಕೋಲಾರ | 2 | 1 | 3 |
| 20 | ಕೊಪ್ಪಳ | 15 | 6 | 21 |
| 21 | ಮಂಡ್ಯ | 32 | 1 | 33 |
| 22 | ಮೈಸೂರು | 17 | 6 | 23 |
| 23 | ರಾಯಚೂರು | 13 | 6 | 19 |
| 24 | ರಾಮನಗರ | 6 | 2 | 8 |
| 25 | ಶಿವಮೊಗ್ಗ | 6 | 4 | 10 |
| 26 | ತುಮಕೂರು | 22 | 16 | 38 |
| 27 | ಉಡುಪಿ | 0 | 0 | 0 |
| 28 | ಉತ್ತರಕನ್ನಡ | 0 | 0 | 0 |
| 29 | ವಿಜಯಪುರ | 75 | 21 | 96 |
| 30 | ಯಾದಗಿರಿ | 1 | 0 | 1 |
| **Grand Total** | | **487** | **214** | **701** |